ಅಕ್ಷರ ಪ್ರತಿಷ್ಠಾನದ ಅಧ್ಯಕ್ಷೆ
ರೋಹಿಣಿ ನಿಲೇಕಣಿ



# ನಿಮ್ಮೊಡನೆ

**ಅಕ್ಷರ ಪ್ರತಿಷ್ಠಾನದ ಕಾರ್ಯಕ್ರಮ ಸ್ವರೂಪ ಏನು? ಅವುಗಳ ಮುಖ್ಯ ಗುರಿಯೇನು?**

ಅಕ್ಷರ ಪ್ರತಿಷ್ಠಾನವು ಸರ್ಕಾರ, ಸಮುದಾಯ ಮತ್ತು ಕಾರ್ಪೋರೇಟ್ ವ್ಯವಸ್ಥೆಯ ಸಹಭಾಗಿತ್ವದ ಸಂಸ್ಥೆಯಾಗಿದ್ದು, ಬೆಂಗಳೂರಿನ ಪ್ರತಿಯೊಂದು ಮಗು ಶಾಲೆಯಲ್ಲಿ ಪ್ರವೇಶ ಪಡೆದು, ಉತ್ತಮ ರೀತಿಯಲ್ಲಿ ಶಿಕ್ಷಣ ಪಡೆಯುವಂತೆ ನೋಡಿಕೊಳ್ಳುವುದು ಅದರ ಗುರಿ. ಪ್ರತಿಷ್ಠಾನವು ಪ್ರಥಮ್ ಶೈಕ್ಷಣಿಕ ಯೋಜನಾ ಸಮೂಹದ ಒಂದು ಅಂಗ.

**ನೀವು ಈ ಕಾರ್ಯಕ್ರಮಗಳನ್ನು ಹೇಗೆ ಕೃತಿಗಿಳಿಸುತ್ತೀರಿ?**

ನಮ್ಮ ಬಳಿ ಸೇವಾ ಮನೋಭಾವದ ಟ್ರಸ್ಟಿಗಳು, ಸಿಬ್ಬಂದಿ ಮತ್ತು ನೂರಾರು ಮಂದಿ ಸ್ವಯಂಸೇವಕರು ಇದ್ದಾರೆ. ಅವರ ಸಹಾಯದಿಂದ ನಾವು ನಮ್ಮ ಕಾರ್ಯಕ್ರಮಗಳನ್ನು ಜಾರಿಗೆ ತರುತ್ತೇವೆ.

**ನಿಮ್ಮ ಕಾರ್ಯಕ್ರಮಗಳಿಗೆ ಹಣವನ್ನು ಹೇಗೆ ಹೊಂದಿಸುತ್ತೀರಿ? ಪ್ರತಿಷ್ಠಾನದ ದಾನಿಗಳು ಯಾರು?**

ಪ್ರತಿಷ್ಠಾನದ ಅಧ್ಯಕ್ಷರು ಸೇರಿದಂತೆ ಹಲವು ದಾನಿಗಳಿದ್ದಾರೆ. ಅಮೆರಿಕದ ಪ್ರಥಮ್ ಸಂಸ್ಥೆ, ಸಿಟಿಬ್ಯಾಂಕ್, ಕರ್ನಾಟಕ ಸರ್ಕಾರ ಮತ್ತಿತರ ಸರ್ಕಾರಿ ಹಾಗೂ ಸರ್ಕಾರೇತರ ಸಂಘಟನೆಗಳಿಂದ ನಮ್ಮ ಕಾರ್ಯಕ್ರಮಗಳಿಗೆ ಆರ್ಥಿಕ ಸಹಾಯ ದೊರೆಯುತ್ತದೆ.

**ಬೇಸಿಗೆ ರಜದ ಸಮಯದಲ್ಲಿ ಪ್ರತಿಷ್ಠಾನವು 'ರೀಡ್ ಸಿಟಿ' ಎಂಬ ವಿಶಿಷ್ಟ ಕಾರ್ಯಕ್ರಮವನ್ನು ಹಮ್ಮಿಕೊಂಡಿತ್ತಲ್ಲವೇ? ಅದಕ್ಕೆ ಪ್ರತಿಕ್ರಿಯೆ ಹೇಗಿತ್ತು? ಸೌಲಭ್ಯರಹಿತ ಮಕ್ಕಳಿಗೆ ಅದು ಎಷ್ಟರಮಟ್ಟಿಗೆ ಸಹಾಯ ಮಾಡಿತು?**

'ರೀಡ್ ಸಿಟಿ' ಒಂದು ಯಶಸ್ವಿ ಕಾರ್ಯಕ್ರಮವಾಗಿತ್ತು. ಪ್ರಸ್ತುತ ನಾವು ಕನ್ನಡ ಮತ್ತು ಉರ್ದುವಿನ ನೂತನ ಓದುಗರಿಗಾಗಿ ಆಸಕ್ತಿದಾಯಕ ಓದಬಹುದಾದ ಸಂಗತಿಗಳನ್ನು ರಚಿಸಲು ಯೋಜಿಸುತ್ತಿದ್ದೇವೆ. ಈ ವರ್ಷದ ನಂತರದ ದಿನಗಳಲ್ಲಿ ಈ ಓದುವಿಕೆಯ ಕಾರ್ಯಕ್ರಮವನ್ನು ಇನ್ನೂ ಹೆಚ್ಚಿನ ಮಟ್ಟದಲ್ಲಿ ಹಮ್ಮಿಕೊಂಡು ಹೆಚ್ಚು ಹೆಚ್ಚು ಮಕ್ಕಳನ್ನು ಓದಿನ ಪ್ರಪಂಚಕ್ಕೆ ಸೇರ್ಪಡೆ ಮಾಡಬೇಕೆಂದು ನಾವು ಬಯಸುತ್ತೇವೆ.

■ ರೇಖಾ ಹೆಗಡೆ ಬಾಳೇಸರ